# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,

# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:5004/2021** ಪ್ರಾ.ಸಾ-6

ಚಾಸಾ-7

ದಿನಾಂಕ:12-04-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಹೆಸರು | ಜಗದೀಶ |
| ತಂದೆಯ ಹೆಸರು | ನರೇಶ |
| ವಯಸ್ಸು | 24 |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ದೇವರಹಳ್ಳಿ, ಕೊರಟಗೆರೆ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ :-**

ನಾನು ಎರಡು ವರ್ಷಗಳ ಹಿಂದೆ ಕಾಮೇನಹಳ್ಳಿಯಲ್ಲಿ ಇರುವ ಚಂದನ್ fuelers ಪೆಟ್ರೋಲ್ ಬಂಕ್ ನಲ್ಲಿ ಕೆಲಸಕ್ಕೆ ಇದ್ದೆ. ಬಂಕ್ ನಲ್ಲಿ ಗನ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದೆ. ನ್ಯಾಯಾಲಯದ ಮುಂದೆ ಇರುವ 4 ನೇ ಆರೋಪಿ ಮತ್ತು ವಿ.ಸಿ ಮೂಲಕ ನೋಡುತ್ತಿರುವ 1 ಮತ್ತು 2 ನೇ ಆರೋಪಿಗಳು ಕೂಡ ಗೊತ್ತಿಲ್ಲ. ಈ ಹಿಂದೆ ಅವರನ್ನು ನೋಡಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿಗಳು ಏನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

ಚಾಸಾ-7

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :-**

ದಿನಾಂಕ:24-09-2020 ರಂದು ರಾತ್ರಿ 07:00 ರಿಂದ 07:30 ಗಂಟೆ ಸಮಯದಲ್ಲಿ ನಾನು ಪೆಟ್ರೋಲ್ ಬಂಕ್ ನಲ್ಲಿ ಇದ್ದಾಗ ಒಂದು ನಂಬರ್ ಇಲ್ಲದ TVC Victor ಮೋಟರ್ ಬೈಕ್ ನಲ್ಲಿ ಮೂರು ಜನ ಕೊರಟಗೆರೆ ಕಡೆಯಿಂದ ಬಂದು ರೂ.200/- ಪೆಟ್ರೋಲ್ ಹಾಕಿಸಿಕೊಂಡು ಬಳಿಕ ಇನ್ನು ಪೆಟ್ರೋಲ್ ಬೇಕು ಎಂದು ಹೇಳಿ ಖಾಲಿ ನೀರಿನ ಬಾಟಲ್ ಕೇಳಿದರು, ಆಗ ನಾನು ಅಲ್ಲಿದ್ದ 2 ಲೀಟರ್ ನ ನೀರಿನ ಬಾಟಲ್ ಅನ್ನು ತೋರಿಸಿದಾಗ ಅವರು ಅದನ್ನು ತೆಗೆದುಕೊಂಡು ಅದರಲ್ಲಿ ರೂ.150/- ರೂಪಾಯಿಗೆ ಪೆಟ್ರೋಲ್ ಹಾಕಿಸಿಕೊಂಡು ಮಧುಗಿರಿ ಕಡೆಗೆ ಹೋದರು ಎಂದರೆ ಸರಿಯಲ್ಲ. ನಾಲ್ಕು ದಿವಸ ಬಿಟ್ಟು ದಿನಾಂಕ:28-09-2020 ರಂದು ಪೊಲೀಸರು ಇಬ್ಬರು ವ್ಯಕ್ತಿಗಳನ್ನು ಕರೆದುಕೊಂಡು ನಮ್ಮ ಪೆಟ್ರೋಲ್ ಬಂಕ್ ಗೆ ಬಂದಿದ್ದರು. ಆಗ ನಾನು ಮತ್ತು ಚಾಸಾ-6 ಆ ಮೂರು ಮತ್ತು ನಾಲ್ಕನೇ ಆರೋಪಿಗಳನ್ನು ನೋಡಿ ಇವರೆ ನಮ್ಮ ಪೆಟ್ರೋಲ್ ಬಂಕ್ ನಲ್ಲಿ ದ್ವಿಚಕ್ರ ವಾಹನಕ್ಕೆ ಪೆಟ್ರೋಲ್ ತುಂಬಿಸಿ ಪ್ಲಾಸ್ಟಿಕ್ ಬಾಟಲ್ ನಲ್ಲಿ ರೂ.150/- ಮೌಲ್ಯದ ಪೆಟ್ರೋಲ್ ಒಟ್ಟು ರೂ.350/- ರೂಪಾಯಿ ಕೊಟ್ಟಿದ್ದಾರೆ ಎಂದು ಪೊಲೀಸರಿಗೆ ಹೇಳಿದೆವು ಎಂದರೆ ಸರಿಯಲ್ಲ. ಪೊಲೀಸರು ಅವರ ಫೈಲ್ ನಲ್ಲಿ ಇದ್ದ ಒಬ್ಬ ವ್ಯಕ್ತಿಯ ಫೋಟೋ ತೋರಿಸಿದಾಗ ನಾನು ಅದರಲ್ಲಿ ಇದ್ದ ವ್ಯಕ್ತಿಯನ್ನು ನೋಡಿ ಗುರುತಿಸಿ ಅವನೇ 24 ನೇ ತಾರೀಖಿನಂದು ಪೆಟ್ರೋಲ್ ಹಾಕಿದಾಗ ರೂ.350/- ರೂಪಾಯಿ ಹಣ ನೀಡಿದವ ಎಂದು ಹೇಳಿದೆ ಎಂದರೆ ಸರಿಯಲ್ಲ. ನನ್ನ ಮುಂದೆಯೇ ಪೊಲೀಸರು ಆ ಇಬ್ಬರು ವ್ಯಕ್ತಿಗಳನ್ನು ವಿಚಾರಿಸಿದಾಗ ಅವರು ಮಧುಗಿರಿಯ ಶ್ರೀನಿವಾಸ ವೈನ್ಸ್ ನಲ್ಲಿ ಎರಡು ಖಾಲಿ ಬಿಯರ್ ಬಾಟಲ್ ಗಳನ್ನು ತೆಗೆದುಕೊಂಡು ಅದಕ್ಕೆ ಪೆಟ್ರೋಲ್ ತುಂಬಿಸಿ ಬಟ್ಟೆ ಸುತ್ತಿ ಕೊಡಿಗೇನಹಳ್ಳಿಯ ನಂದಿನಿ ವೈನ್ಸ್ ಬಳಿ ಹೋಗಿ 2 ನೇ ಆರೋಪಿ ಆ ಪೆಟ್ರೋಲ್ ತುಂಬಿಸಿದ ಬಿಯರ್ ಬಾಟಲ್ ಗೆ ಬೆಂಕಿ ಹಚ್ಚಿ ನಂದಿನಿ ವೈನ್ಸ್ ಮೇಲೆ ಎಸೆದಿದ್ದ ಎಂದು ಹೇಳಿದರು ಎಂದರೆ ಸರಿಯಲ್ಲ. ನಂದಿನಿ ವೈನ್ಸ್ ಮಾಲೀಕರು ಆರೋಪಿಗಳಿಗೆ ಮದ್ಯ ಮತ್ತು ಹಣ ನೀಡದೆ ಇದ್ದ ಕಾರಣ ಆರೋಪಿಗಳು 1 ನೇ ಆರೋಪಿಯ ಪ್ರಚೋದನೆಯ ಮೇರೆಗೆ ನಂದಿನಿ ವೈನ್ಸ್ ಮೇಲೆ ಪೆಟ್ರೋಲ್ ಬಾಂಬ್ ಎಸೆದರು ಎಂದು ಮತ್ತೆ ತಿಳಿಯಿತು ಎಂದರೆ ಸರಿಯಲ್ಲ. ನಾನು ಈ ಬಗ್ಗೆ ವಿವರವಾದ ಹೇಳಿಕೆಯನ್ನು ದಿನಾಂಕ:29-09-2020 ರಂದು ಪೊಲೀಸರ

ಮುಂದೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ನಾನು ಹೆದರಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ 4 ನೇ ಆರೋಪಿ ಮತ್ತು ವಿ.ಸಿ ಮೂಲಕ ನೋಡುತ್ತಿರುವ 2 ನೇ ಆರೋಪಿಯನ್ನು ನಾನು ನಮ್ಮ ಪೆಟ್ರೋಲ್ ಬಂಕ್ ಬಳಿ ಬಂದಿದ್ದನ್ನು ನೋಡಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿಯನ್ನು ಕೂಡ ನಾನು ಪೆಟ್ರೋಲ್ ಬಂಕ್ ಬಳಿ ಬಂದಾಗ ನೋಡಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ನ್ಯಾಯಾಲಯದ ಮುಂದೆ ಗೈರು ಹಾಜರಾಗಿದ್ದು ಅವನ ಪರವಾಗಿ ವಕೀಲರು ವಿನಾಯತಿ ಅರ್ಜಿ ಹಾಕಿದ್ದು ಗುರುತಿಸಲು ತಕರಾರು ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ದಿನಾಂಕ:29-09-2020 ರ ಹೇಳಿಕೆಯನುವ್ನ ನಿರಾಕರಿಸಿದ ಕಾರಣ ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

**ಪಾಟೀಸವಾಲು ಶ್ರೀ.PNR ವಕೀಲರಿಂದ 3 ನೇ ಆರೋಪಿ ಪರವಾಗಿ:-**

ಪಾಟೀಸವಾಲು ಇಲ್ಲ ಎಂದು ನುಡಿಯುತ್ತಾರೆ.

**ಪಾಟೀಸವಾಲು ಶ್ರೀ.LRR & RH ವಕೀಲರಿಂದ 1, 2 ಮತ್ತು 4 ನೇ ಆರೋಪಿ ಪರವಾಗಿ:-**

1, 2 ಮತ್ತು 4 ನೇ ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು ಆರೋಪಿಗಳಿಗೆ ಪಾಟೀಸವಾಲು ಮಾಡಲು ಹೇಳಿದಾಗ ಪಾಟೀಸವಾಲು ಮಾಡಿರುವುದಿಲ್ಲ. ಆದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**